> 'ಕಷ್ಟಪಡುವುದು ಅವರವರ ಕರ್ಮ ಇರಬಹುದು; ಆದರೆ ಸಹಾಯ ಮಾಡುವುದು ನನ್ನ ಧರ್ಮ!'

ಪೂರ್ಣವಾಗಿ ಅಂತರ್ಮುಖಿಯಾದಳು. ಮನೆಯ ಹಂಗನ್ನು ತೊರೆದಳು. ಬಿಸಿಲಿರಲಿ ಮಳೆಯೇ ಬರಲಿ, ಧ್ಯಾನಸ್ಥಳಾಗಿ ಹಗಲೂ ರಾತ್ರಿ ಸಾಗರತೀರದಲ್ಲಿ ಕುಳಿತಿರುತ್ತಿದ್ದಳು. ಸಾಧನೆ ಗಾಢವಾಯಿತು.

### ಈಶ್ವರ ಮತ್ತು ಇಷ್ಟದೈವ

ಮುಂದೊಮ್ಮೆ 'ಅಮ್ಮ ಕೃಷ್ಣನನ್ನು ಯಾಕೆ ಇಷ್ಟದೈವವಾಗಿ ಭಾವಿಸಿದರು?' ಎಂದು ಯಾರೋ ಕೇಳಿದಾಗ ಅಮ್ಮ ವಿವರಿಸಿದರು: 'ವಾಸ್ತವವಾಗಿ ಈಶ್ವರ ಅನೇಕನಿಲ್ಲ; ಇರುವುದು ಒಬ್ಬನೇ ಈಶ್ವರ. ಮಕ್ಕಳೆ, ಒಂದು ವಸ್ತುವನ್ನು ಜನ ಬೇರೆ ಬೇರೆ ಹೆಸರುಗಳಿಂದ ಕರೆದರೆ ಆಗ ಆ ವಸ್ತುವೂ ಬೇರೆ ಬೇರೆಯಾಗುವುದೆ? ಹಾಲನ್ನು ಮಲಯಾಳದಲ್ಲಿ 'ಪಾಲ್' ಎನ್ನುವರು. ಇಂಗ್ಲೀಷ್‌ನಲ್ಲಿ 'ಮಿಲ್ಕ್' ಎನ್ನುವರು. ಹಿಂದಿಯಲ್ಲಿ 'ದೂಧ್' ಎನ್ನುವರು. ಹೀಗೆ ಹಾಲಿಗೆ ಅನೇಕ ಹೆಸರುಗಳಿರುವ ಕಾರಣ ಹಾಲೇನೂ ಅನೇಕವಾಗುವುದಿಲ್ಲ. ಅದೇ ರೀತಿ, ಈಶ್ವರನಿಗೆ ನಾವು ಹಲವು ನಾಮಗಳನ್ನು ಕೊಟ್ಟಿದ್ದೇವೆ. ಆದರೆ ಈಶ್ವರನೊಬ್ಬನೇ. ನಾವು ನಮ್ಮ ಸಂಸ್ಕಾರಕ್ಕೆ ತಕ್ಕಂತೆ ಇಷ್ಟದೈವವನ್ನು ಆರಿಸಿಕೊಳ್ಳಬಹುದಾದ ಸ್ವಾತಂತ್ರ್ಯ ಸನಾತನ ಧರ್ಮದಲ್ಲಿದೆ; ಇದಕ್ಕಾಗಿಯೇ ನಮ್ಮ ಪುರಾತನ ಋಷಿಮುನಿಗಳು ವಿವಿಧ ದೇವತೆಗಳನ್ನು ಸಂಕಲ್ಪಿಸಿದ್ದಾರೆ' ಎನ್ನುತ್ತಾರೆ ಅಮ್ಮ.

ಇಂದು ಅಮ್ಮ ದೇಶದ ವಿವಿಧ ಭಾಗಗಳಲ್ಲಿ 22 ಬ್ರಹ್ಮಸ್ಥಾನ ಮಂದಿರಗಳನ್ನು ಸ್ಥಾಪಿಸಿದ್ದಾರೆ. ಒಂದೇ ಶಿಲೆಯ ನಾಲ್ಕು ಮುಖಗಳಲ್ಲಿ ಶಿವ, ಪಾರ್ವತಿ, ಗಣೇಶ, ಸುಬ್ರಹ್ಮಣ್ಯ – ಈ ರೂಪಗಳನ್ನು ಸಂಕಲ್ಪಿಸಿ, ತಾವೇ ಆ ಮೂರ್ತಿಗಳಿಗೆ ಪ್ರಾಣಪ್ರತಿಷ್ಠಾಪನೆ ಮಾಡಿದ್ದಾರೆ. ಬ್ರಹ್ಮಚಾರಿಣಿಯರಿಗೂ ವೇದಪಾಠಗಳಲ್ಲಿ ಮತ್ತು ಪೂಜಾವಿಧಿಗಳಲ್ಲಿ ಶಿಕ್ಷಣ ನೀಡಿ, ಅವರನ್ನು ಪೂಜಾರಿಣಿಯರನ್ನಾಗಿ ನೇಮಿಸಿದ್ದಾರೆ.

ಅಮ್ಮನ ದೇಶವಿದೇಶದ ಮಕ್ಕಳು ಪರಸ್ಪರ ವಂದಿಸುವುದು 'ನಮಃ ಶಿವಾಯ!' ಎಂಬ ಮಂತ್ರದೊಂದಿಗೆ.

### ಪ್ರಕೃತಿಯೇ ಪಾಲಿಸಿತು

ಮಳೆ ಬಿಸಿಲು ಗಾಳಿಗಳಿಗೆ ಜಗ್ಗದೆ, ಪರಾಶಕ್ತಿಯೊಂದಿಗೆ ಐಕ್ಯತೆ ಸಾಧಿಸಲು ಏಕೋನಿಷ್ಠೆಯಿಂದ ಧ್ಯಾನಸ್ಥಳಾಗಿರುತ್ತಿದ್ದ ಸುಧಾಮಣಿಯನ್ನು ಆ ದಿನಗಳಲ್ಲಿ ಪ್ರಾಣಿಪಕ್ಷಿಗಳೇ ಪಾಲಿಸಿದವು. ತನ್ನ ಹೊಟ್ಟೆ ಹಸಿದಿರುವುದು ಅವಳಿಗೇ ವೇದ್ಯವಾಗದಾಗ ಒಂದು ಹದ್ದು ಸಾಗರದಿಂದ ಒಂದು ಮೀನನ್ನು ಹಿಡಿದುತಂದು ಅವಳ ಮಡಿಲಿಗೆ ಹಾಕುತ್ತಿತ್ತು. ಒಂದು ನಾಯಿ ಸದಾ ಅವಳ ಕಾವಲು ಕಾಯುತ್ತಿದ್ದರೆ, ಇನ್ನೊಂದು ನಾಯಿ ಎಲ್ಲಿಂದಲೋ ಊಟದ ಪೊಟ್ಟಣವನ್ನು ತಂದು ಅವಳ ಮಡಿಲಿಗೆ ಹಾಕುತ್ತಿತ್ತು. ಕೆಲವೊಮ್ಮೆ ತಂದೆಯು, 'ಮಗಳು ಎಚ್ಚರವಾಗಲಿ, ಆಹಾರ ಸೇವಿಸಲಿ' ಎಂದು ಅವಳನ್ನು ಅಲುಗಿಸುತ್ತಿದ್ದರು. ಆಗ ಎಚ್ಚರವಾಗದಿದ್ದ ಸುಧಾಮಣಿಗೆ ಪ್ರಾಣಿಪಕ್ಷಿಗಳ ಮನದಾಳದ ಬಯಕೆ ಅರಿವಾಗುತ್ತಿತ್ತು; ಕಣ್ತೆರೆದು ಅವು ನೀಡಿದ್ದನ್ನು ತಿನ್ನುತ್ತಿದ್ದಳು. ಹಸುವೊಂದು ಆರು ಕಿಲೋಮೀಟರು ದೂರದಿಂದ ಓಡಿಬಂದು ತನ್ನ ಕೆಚ್ಚಲಿನಿಂದ ನೇರವಾಗಿ ಅವಳಿಗೆ ಹಾಲೂಡುತ್ತಿತ್ತು. ಘೋರತಪಸ್ಸಿನ ಫಲವಾಗಿ ಸುಧಾಮಣಿಯ ಮೈತಾಪ ಹೆಚ್ಚಿದಾಗ ಹಾವುಗಳು ಬಂದು ಅವಳ ಮೈಯ್ಯನ್ನು ಸುತ್ತಿಕೊಂಡು ತಂಪು ನೀಡುತ್ತಿದ್ದವು.



### ಕರುಣೆಯ ಸಂಕಲ್ಪ

ಸಾಧನಾಲೀಲೆಯ ಮುಕ್ತಾಯದ ರೂಪದಲ್ಲಿ ಸುಧಾಮಣಿಯು ಪರಮಾನಂದವನ್ನು ಪಡೆದಳು. ಸೃಷ್ಟಿಯೂ ತಾನೂ ಭಿನ್ನರಲ್ಲ ಎಂಬ ಅವಸ್ಥೆ ಅವಳದಾಯಿತು. ಅವಳಿನ್ನು ಆ ಅವಸ್ಥೆಯಲ್ಲಿಯೇ ಇದ್ದುಬಿಡಬಹುದಿತ್ತು; ಆದರೆ ಅವಳ ಅಂತರಂಗದಲ್ಲಿ ಕರುಣೆ ಹೊಮ್ಮಿತು. ಲೋಕಸೇವೆಯ ಮಹಾಸಂಕಲ್ಪ ಮೂಡಿತು. ತನಗೆ ದೊರೆತ ಪರಮಾನಂದವನ್ನು ತನ್ನಿಂದ ಭಿನ್ನವಲ್ಲದ ಲೋಕದ ಪ್ರತಿಯೊಬ್ಬರಿಗೂ ನೀಡಬೇಕು, ಎಂಬ ಮಹಾಸಂಕಲ್ಪವದು. ಈ ಮಹಾನ್ ಉದ್ದೇಶವನ್ನು ಪೂರೈಸಲೆಂದೇ ಆಕೆ ವಿಶ್ವಮಾತೃತ್ವಭಾವವನ್ನು ತಳೆದರು.

ಅಂದಿನಿಂದ ಸೃಷ್ಟಿಯ ಪ್ರತಿಯೊಂದು ಜೀವಿಯ ಕಡೆಗೂ ಅಮ್ಮನಿಂದ ಪ್ರೇಮತರಂಗಗಳು ಸ್ಪಷ್ಟವಾಗಿ ಸೂಸತೊಡಗಿದವು. 'ಹೂವ ಅರಳಿದೆ' ಎಂದು ದುಂಬಿಗೆ ಹೇಳಿಕಳಿಸಬೇಕಿಲ್ಲವಲ್ಲ! ಸುತ್ತಮುತ್ತಲಿನ ಊರುಗಳಿಂದ ಜನರು ಅಮ್ಮನನ್ನು ಅರಸಿ ಬರತೊಡಗಿದರು. ಅಮ್ಮನ ದರ್ಶನದಿಂದಾಗಿ ಅನೇಕರ ಸಮಸ್ಯೆಗಳು ಪರಿಹಾರವಾದವು. ಬಹುಬೇಗ ದೂರದಿಂದ, ವಿದೇಶಗಳಿಂದಲೂ ಜನರು ಆ ಕುಗ್ರಾಮಕ್ಕೆ ಬರತೊಡಗಿದರು. ಅಮ್ಮ ತಮ್ಮ ಬಳಿಗೆ ಬರುವ ಪ್ರತಿಯೊಬ್ಬರಿಗೂ ಯಾವುದೇ ಪ್ರತ್ಯಾಪೇಕ್ಷೆಯಿಲ್ಲದೆ ಅನಿರ್ಬಂಧಿತ ಮಾತೃಪ್ರೇಮವನ್ನು ಯಥೇಚ್ಛವಾಗಿ ನೀಡತೊಡಗಿದರು.

ಮಾನವ ಚರಿತ್ರೆಯಾಗಲೀ, ಮಹಾತ್ಮರುಗಳ ಚರಿತ್ರೆಯೇ ಆಗಲಿ ಕಂಡುಕೇಳರಿಯದ ರೀತಿಯಲ್ಲಿ ಅಮ್ಮ ಬಳಿಗೆ ಬಂದವರನ್ನು, ಯಾವುದೇ ಭೇದಭಾವವಿಲ್ಲದೆ ನಿಜಬಾಹುಗಳಲ್ಲಿ ಸ್ವೀಕರಿಸಿಕೊಳ್ಳತೊಡಗಿದರು.

ಈ ಹಿಂದೆ ಅಮ್ಮನನ್ನು 'ಕಪಟಿ' ಎಂದು ಬಗೆದು ಕೆಲವು ನಾಸ್ತಿಕರು ಬಹುವಾಗಿ ಕಿರುಕುಳ ಕೊಡುತ್ತಿದ್ದರು. ಹಲವಾರು ಸಲ ಅಮ್ಮನನ್ನು ಕೊಲ್ಲಲು ಪ್ರಯತ್ನಿಸಿದ್ದರು. ಆದರೆ ಅವರೆಲ್ಲರ ಮೇಲೂ ಅಮ್ಮ ತೋರಿದ್ದು ಪ್ರೇಮ ಕರುಣೆಗಳನ್ನು ಮಾತ್ರ. ಅವರಲ್ಲೊಬ್ಬನು ರೋಗದಿಂದಾಗಿ ಆಸ್ಪತ್ರೆ ಸೇರಿದಾಗ ಅಮ್ಮ ತಾವೇ ಆಸ್ಪತ್ರೆಗೆ ಹೋಗಿ, ಅವನಿಗೆ ಕೈಯ್ಯಾರೆ ಊಟ ಮಾಡಿಸಿ, ಅವನ ಪಶ್ಚಾತ್ತಾಪದ ಕಂಬನಿಯನ್ನು ಒರೆಸಿದರು.

ಇಂದಿಗೂ ಅಮ್ಮ ಜನರ ಅಳಲಿಗೆ ಸ್ಪಂದಿಸುತ್ತಾ ತಾವೂ ಕಣ್ಣೀರು ಮಿಡಿಯುವರು; ಜನರ ಸಂತೋಷದಲ್ಲಿ ತಾವೂ ಸಂತೋಷಿಸುವರು.

### ಅಮೃತಪುರಿ

80ರ ದಶಕದಲ್ಲಿ ಆಧ್ಯಾತ್ಮ ಸಾಧಕರು ಅಮ್ಮನಿಂದ ಮಾರ್ಗದರ್ಶನ ಪಡೆಯಲೆಂದು ದೇಶ ವಿದೇಶಗಳಿಂದ ಬಂದು ನೆಲೆಸತೊಡಗಿದರು. ಅಮ್ಮನ ಜನ್ಮಸ್ಥಳವೂ, ಸಾಧನಾರಂಗವೂ ಆಗಿದ್ದ ದ್ವೀಪಭಾಗವು 'ಅಮೃತಪುರಿ' ಆಶ್ರಮವಾಗಿ ರೂಪುಗೊಂಡಿತು.

ಅನತಿಕಾಲದಲ್ಲಿ ಲೌಕಿಕ ಜೀವನದ ಇತಿಮಿತಿಗಳಿಂದ ಬೇಸತ್ತು, ಆಧ್ಯಾತ್ಮ ಸಾಧನೆಗೆಂದು ತಮ್ಮನ್ನು ಅರ್ಪಿಸಿಕೊಂಡು ಆಶ್ರಮದಲ್ಲಿ ನೆಲೆಸಲು ಸುಶಿಕ್ಷಿತರೂ, ಸಶಕ್ತರೂ, ಸಮರ್ಥರೂ, ಇತರರೂ ಮುಂದಾದರು. ಅದೇ ರೀತಿ, ಲೌಕಿಕ ಜೀವನವನ್ನೇ ಮುಂದುವರೆಸುತ್ತಾ ಅಮ್ಮನ ಮಾರ್ಗದರ್ಶನದಲ್ಲಿ ಲೋಕಸೇವೆ ಮಾಡಲು ದೇಶ ವಿದೇಶಗಳಲ್ಲಿ ಅನೇಕ